ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ,
ಡಾ: ಅಂಬೇಡ್ಕರ್ ವೀಧಿ,ಬೆಂಗಳೂರು-01 ದೂರವಾಣಿ ಸಂಖ್ಯೆ: 080-22864681
ಇಮೇಲ್: dfkarnataka@rediffmail.com.

---

ಸಂಖ್ಯೆ/TECHOFSP/125/2022,E-863703 ದಿನಾಂಕ:16/12/2022

**ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ರವರ ನಡವಳಿಗಳು**

ವಿಷಯ:-2022-23 ನೇ ಸಾಲಿನಲ್ಲಿ ರಾಜ್ಯದ ವಿವಿಧ ಮೀನುಮರಿ ಉತ್ಪಾದನಾ ಕೇಂದ್ರಗಳಿಗೆ ತೇಲುವ ಪೆಲೆಟೆಡ್ ತಾಯಿ ಮೀನು ಆಹಾರ, ಕಡ್ಲೆಕಾಯಿಹಿಂಡಿ ಮತ್ತು ಪಾಲಿಷ್ ತೌಡು ಸರಬರಾಜಿಗೆ ಇ- ಟೆಂಡರ್ ನಲ್ಲಿ ಅನುಮೋದನೆ ಗೊಂಡ ಅತೀ ಕಡಿಮೆ ದರ ನಮೂದಿಸಿದ (ಎಲ್-1) ಸರಬರಾಜುದಾರರನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ:-1)ಮೀನುಗಾರಿಕೆ ಇಲಾಖೆಯ ಟೆಂಡರ್ ಪ್ರಕಟಣೆ TECHOFSP/125/2022, E-863703,ದಿನಾಂಕ:17/11/2022

*****

2022-23 ನೇ ಸಾಲಿನಲ್ಲಿ ರಾಜ್ಯದ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಿಗೆ ತೇಲುವ ಪೆಲೆಟೆಡ್ ತಾಯಿ ಮೀನು ಆಹಾರ, ಕಡ್ಲೆಕಾಯಿಹಿಂಡಿ ಮತ್ತು ಪಾಲಿಷ್ ತೌಡು ಸರಬರಾಜು ಮಾಡುವ ಸಲುವಾಗಿ ಉಲ್ಲೇಖ (1) ರಲ್ಲಿ ರಾಜ್ಯ ಮಟ್ಟದಲ್ಲಿ ಇ-ಟೆಂಡರ್ (ಮರುಟೆಂಡರ್) ಕರೆಯಲಾಗಿರುತ್ತದೆ. ಇ-ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಅದರಂತೆ ತೇಲುವ ಪೆಲೆಟೆಡ್ ತಾಯಿ ಮೀನು ಆಹಾರ (Extruded Floating Pelleted Broodstock Fish Feed), ಕಡ್ಲೆಕಾಯಿಹಿಂಡಿ ಮತ್ತು ಪಾಲಿಷ್ ತೌಡು ಸರಬರಾಜು ಮಾಡಲು (ಸಮಾಲೋಚನೆ ಸಭೆಯಲ್ಲಿ ನಿರ್ಧರಿಸಿದಂತೆ) ಅನುಬಂಧ-1 ರಲ್ಲಿ ತೋರಿಸಿರುವ ಎಲ್-1 ಸರಬರಾಜುದಾರರನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಮೋದಿಸಲಾಗಿದೆ.

2022-23 ನೇ ಸಾಲಿನಲ್ಲಿ ರಾಜ್ಯದ ವಿವಿಧ ಸರ್ಕಾರಿ ಮೀನುಮರಿ ಉತ್ಪಾದನಾ ಕೇಂದ್ರಗಳಿಗೆ ಅವಶ್ಯವಿರುವ ಮೀನು ಆಹಾರವನ್ನು ಅನುಮೋದನೆಗೊಂಡ ಎಲ್-1 ಸರಬರಾಜುದಾರರಿಂದ ಹಾಗು ಟೆಂಡರ್ ನಲ್ಲಿ ಅನುಮೋದನೆಗೊಂಡಿರುವ ಸಾಮಗ್ರಿಗಳ ನಿರ್ದಿಷ್ಟ ವಿವರಗಳಂತೆ ಮಾತ್ರ ಖರೀದಿಸಲು ಕ್ರಮ ವಹಿಸುವುದು.

**ಷರತ್ತು ಮತ್ತು ನಿಬಂಧನೆಗಳು:**
**ಸರಬರಾಜುದಾರರಿಗೆ**

1. ಈ ಅನುಮೋದಿತ ದರ ದಿ:31-12-2023 ರವರೆಗೆ ಮಾತ್ರ ಸಿಂಧುತ್ವ ಹೊಂದಿರುತ್ತದೆ.
2.ಅನುಮೋದಿತ ಸರಬರಾಜುದಾರರು ಟೆಂಡರ್ ನಿಯಮ ಮತ್ತು ಸಲ್ಲಿಸಿರುವ ಕರಾರುಗಳಿಗೆ ಬದ್ಧರಾಗಿರತಕ್ಕದ್ದು. ಯಾವುದೇ ಕಾರಣಕ್ಕೂ ಈಗ ಒಪ್ಪಿರುವ ದರಗಳನ್ನು ಹೆಚ್ಚಿಸಲು ಸಾಧ್ಯವಿರುವಿದಿಲ್ಲ.
3.ಸರಬರಾಜುದಾರರು ತೇಲುವ ಪೆಲೆಟೆಡ್ ತಾಯಿ ಮೀನು ಆಹಾರ, ಕಡ್ಲೆಕಾಯಿಹಿಂಡಿ ಮತ್ತು ಪಾಲಿಷ್ ತೌಡನ್ನು(ಸಾಗಾಣಿಕೆ ವೆಚ್ಚ ಸೇರಿ)ಈ ಕೆಳಕಂಡ ಅನುಮೋದಿತ ದರದಂತೆ (ಸಮಾಲೋಚನೆ ಸಭೆಯಲ್ಲಿ ನಿರ್ಧರಿಸಿದಂತೆ) ಸರಬರಾಜು ಮಾಡತಕ್ಕದ್ದು.

| ಕ್ರ.ಸಂ. | ಸಾಮಗ್ರಿ ವಿವರ | ದರ ರೂ.(ಪ್ರತಿ ಕೆ.ಜಿ.ಗೆ) |
|---|---|---|
| 1 | ತೇಲುವ ಪೆಲೆಟೆಡ್ ತಾಯಿ ಮೀನು ಆಹಾರ | 59-00 |
| 2 | ಕಡ್ಲೆಕಾಯಿಹಿಂಡಿ | 61-00 |
| 3 | ಪಾಲಿಷ್ ತೌಡು | 37-00 |

4. ಅನುಮೋದಿತ ಸರಬರಾಜುದಾರರು ಮೀನುಗಾರಿಕೆ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳ ಅಧಿಕಾರಿಗಳಿಂದ/ಮೀನುಗಾರಿಕೆ ಜಂಟಿನಿರ್ದೇಶಕರುಗಳಿಂದ ಮಾತ್ರ ಅಧಿಕೃತ ಸರಬರಾಜು ಆದೇಶ ಪಡೆದು ಅದರಂತೆ ಸರಬರಾಜು ಮಾಡತಕ್ಕದ್ದು.

5 ಸರಬರಾಜು ಮಾಡತಕ್ಕ ಆಹಾರ ಸಾಮಗ್ರಿಗಳು ಟೆಂಡರ್ ನಲ್ಲಿ ಅನುಮೋದನೆಗೊಂಡಿರುವ (ಅನುಬಂಧ-1) ನಿರ್ದಿಷ್ಟ ವಿವರಗಳಂತೆ (Specification) ಮತ್ತು ನಿಗದಿತ ಗುಣಮಟ್ಟದಾಗಿರಬೇಕು. ಸರಬರಾಜದಾರರು ಪ್ರತಿ ಬಾರಿಯ ಸರಬರಾಜಿಗಾಗಿ ಸಾಮಗ್ರಿಗಳ ಉತ್ಪಾದಕರು ನೀಡಿದ ಗುಣಮಟ್ಟ ಪರಿಶೀಲನಾ ವರದಿಯನ್ನು ಸಲ್ಲಿಸತಕ್ಕದ್ದು. ಆಹಾರ ಸಾಮಗ್ರಿಗಳ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಸಾಮಾಗ್ರಿಗಳನ್ನು ತಿರಸ್ಕರಿಸುವ ಹಕ್ಕು ಸರಬರಾಜು ಆದೇಶ ನೀಡಿದ ಅಧಿಕಾರಿಗಳಿಗೆ ಅಥವಾ ಅವರ ಮೇಲಾಧಿಕಾರಿಗಳಿಗೆ ಇರುತ್ತದೆ. ಇದರಿಂದಾಗುವ ನಷ್ಟಕ್ಕೆ ಸರಬರಾಜುದಾರರೇ ಹೊಣೆಗಾರರಾಗಿರುತ್ತಾರೆ.

6. ಅನುಮೋದಿತ ಸರಬರಾಜುದಾರರು ತಮಗೆ ನೀಡಿದ ಆದೇಶವನ್ನು ಮತ್ತೊಬ್ಬ ಏಜೆಂಟ್/ವಿತರಕರಿಗೆ ವರ್ಗಾಯಿಸತಕ್ಕದ್ದಲ್ಲ.

7. ಮೀನುಗಾರಿಕೆ ಜಂಟಿನಿದೇಶಕರವರಿಂದ/ಫಾರಂ ಅಧಿಕಾರಿಗಳಿಂದ ಸರಬರಾಜು ಆದೇಶ ಪಡೆದ 15 ದಿನದೊಳಗೆ ಆಹಾರವನ್ನು ಸರಬರಾಜು ಮಾಡತಕ್ಕದ್ದು. ಸಾಗಾಣಿಕೆ ಸಮಯದಲ್ಲಿ ಉಂಟಾಗುವ ಯಾವುದೇ ಹಾನಿಗೆ ಇಲಾಖೆಯು ಜವಾಬ್ದಾರಿಯಲ್ಲ.

8. ಆಹಾರ ಸಾಮಗ್ರಿಗಳನ್ನು ಟೆಂಡರ್‌ನ ಅನುಬಂಧ-111 ರಲ್ಲಿ ಸೂಚಿಸಿರುವ ಸ್ಥಳಗಳಲ್ಲಿ(Delivery points) ಮಾತ್ರ ಸರಬರಾಜು ಮಾಡುವುದು.

9. ಸರಬರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ ಸರಬರಾಜು ಮಾಡಿದ ಫಾರಂ ಅಧಿಕಾರಿಗಳಿಂದ ಸರಬರಾಜು ಪೂರ್ಣಗೊಳಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ ಬಳಿಕ ಪಾವತಿಸಿರುವ ಇಎಂಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.

10. ಸಂಬಂಧಿಸಿದ ಅಧಿಕಾರಿಗಳಿಂದ ಸರಬರಾಜು ಆದೇಶ ಪಡೆದ 15 ದಿನಗಳ ಒಳಗಾಗಿ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡತಕ್ಕದ್ದು. ತಪ್ಪಿದಲ್ಲಿ ಸರಬರಾಜು ಆದೇಶ ರದ್ದಾಗುತ್ತದೆ. ಸರಬರಾಜು ಆದೇಶದಂತೆ ಆಹಾರ ಸಾಮಗ್ರಿಗಳನ್ನು ಪೂರೈಸದ ಅನುಮೋದಿತ ಸರಬರಾಜುದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ, ಅವರ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಮುಂದಿನ 5 ವರ್ಷಗಳ ಇ- ಟೆಂಡರ್‌ನಲ್ಲಿ ಅವರು ಭಾಗವಹಿಸಲು ಅನರ್ಹಗೊಳಿಸಲಾಗುತ್ತದೆ.

**<u>ಇಲಾಖಾಧಿಕಾರಿಗಳಿಗೆ</u>**

1. ಖರೀದಿಸಿದ ಆಹಾರ ಸಾಮಗ್ರಿಗಳು ಟೆಂಡರ್‌ನಲ್ಲಿ ನಿರ್ದಿಷ್ಟ ಪಡಿಸಿದ (Specification-ಅನುಬಂಧ-1 ರಂತೆ) ಮತ್ತು ನಿಗದಿತ ಗುಣಮಟ್ಟದ್ದಾಗಿದೆಯೇ ಎಂಬುದನ್ನು ಸಂಬಂಧಿಸಿದ ಮೀನುಮರಿ ಉತ್ಪಾದನಾ ಕೇಂದ್ರಗಳ ಅಧಿಕಾರಿಗಳು ಪ್ರತಿ ಬಾರಿಯ ಸರಬರಾಜಾಗುವ ಆಹಾರಕ್ಕೆ ಸರಬರಾಜುದಾರರಿಂದ ಉತ್ಪಾದಕರು ನೀಡಿದ ಗುಣಮಟ್ಟ ಪರಿಶೀಲನಾ ವರದಿಯನ್ನು ಪಡೆದು ಪರಿಶೀಲಿಸಿ ದೃಢಪಡಿಸಿಕೊಂಡು ಸಾಮಾಗ್ರಿಗಳನ್ನು ಪಡೆಯತಕ್ಕದ್ದು. ತಪ್ಪಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ಜವಬ್ದಾರರನ್ನಾಗಿಸಲಾಗುವುದು.

2. ಮೀನುಗಾರಿಕೆ ಜಂಟಿ ನಿರ್ದೇಶಕರು/ಫಾರಂ ಅಧಿಕಾರಿಗಳು ಸೂಕ್ತ ಸರಬರಾಜು ಆದೇಶವನ್ನು ಸರಬರಾಜುದಾರರಿಗೆ ನೀಡಿ ಆಹಾರ ಸಾಮಗ್ರಿಗಳನ್ನು 15 ದಿನಗಳ ಒಳಗೆ ಪಡೆಯತಕ್ಕದ್ದು.(ಅನುಬಂಧ- 1 ರಂತೆ)

3. ಯಾವುದೇ ಕಾರಣಕ್ಕೂ ಆಹಾರ ಸಾಮಗ್ರಿಗಳ ಖರೀದಿಯು ಅನುಮೋದಿತ ದರಕ್ಕಿಂತ ಹೆಚ್ಚಾಗಿರಬಾರದು (ಸೂಚಿಸುವ ಸ್ಥಳಕ್ಕೆ ಸಾಗಾಣಿಕೆ ವೆಚ್ಚ ಸೇರಿ).

4. ಸರಬರಾಜುದಾರರಿಗೆ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಸರಬರಾಜುದಾರರು ಪಾಲಿಸಿರುವುದನ್ನು ದೃಡೀಕರಿಸಕೊಳ್ಳತಕ್ಕದ್ದು.

5. ಆಹಾರ ಸರಬರಾಜಿಗೆ ಸಂಬಂಧಿಸಿದ ಯಾವುದೇ ದೂರುಗಳನ್ನು ವಿವರಗಳೊಡನೆ ಮುಂದಿನ ಕ್ರಮಕ್ಕಾಗಿ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

6. ಮೀನು ಆಹಾರವನ್ನು ಪಡೆದ ನಂತರವೇ ಸರಬರಾಜುದಾರರಿಗೆ ಹಣವನ್ನು ಪಾವತಿಸತಕ್ಕದ್ದು. ಯಾವುದೇ ಕಾರಣಕ್ಕೂ ಸಹ ಸಾಮಗ್ರಿಗಳನ್ನು ದಾಸ್ತಾನಿಗೆ ಪಡೆಯದೆ ಸರಬರಾಜುದಾರರಿಗೆ ಹಣ ಪಾವತಿಸತಕ್ಕದಲ್ಲ.

7.ಸರಬರಾಜಾಗುವ ಆಹಾರದ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ನಿಯಮಾನುಸಾರ ಮಾದರಿಗಳನ್ನು ಯಾವುದಾದರೊಂದು ಅಧಿಕೃತ ಪ್ರಯೋಗಾಲಯಕ್ಕೆ ಪರಿಕ್ಷೆಗಾಗಿ ನೀಡಿ, ಪರಿಕ್ಷಾ ಫಲಿತಾಂಶ ಟೆಂಡರ್‌ನಲ್ಲಿ ನಿಗದಿಪಡಿಸಿದ ಗುಣಮಟ್ಟಕ್ಕೆ ತಾಳೆಯಾಗುವುದನ್ನು ಖಚಿತಪಡಿಸಿಕೊಂಡ ನಂತರ ಪಾವತಿಗೆ ಕ್ರಮವಹಿಸುವುದು.

8. ಸರಬರಾಜು ಆದೇಶ ನೀಡಿದ 15 ದಿನಗಳ ಒಳಗಾಗಿ ಮೀನು ಆಹಾರವನ್ನು ಸರಬರಾಜು ಮಾಡದಿದ್ದಲ್ಲಿ ಸರಬರಾಜು ಆದೇಶ ರದ್ದುಪಡಿಸುವುದು. ಹಾಗು ಸರಬರಾಜು ಆದೇಶದಂತೆ ಮೀನು ಆಹಾರವನ್ನು ಪೂರೈಸದ ಅನುಮೋದಿತ ಸರಬರಾಜುದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ, ಅವರ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು. ಸಂಬಂಧಪಟ್ಟ ಅಧಿಕಾರಿಗಳು ಮೀನುಗಾರಿಕೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ಮಾರುಕಟ್ಟೆಯಿಂದ ಪಾರದರ್ಶಕವಾಗಿ ದರಪಟ್ಟಿಗಳ ಆಧಾರದ ಮೇಲೆ ಖರೀದಿಸಲು ನಿಯಮಾನುಸಾರ ಸೂಕ್ತ ಕ್ರಮವಹಿಸುವುದು.

ಅಢಕ:1

ಸಹಿ/-
ಮೀನುಗಾರಿಕೆ ನಿರ್ದೇಶಕರು

ಇವರಿಗೆ,
ಮೀನುಗಾರಿಕೆ ಜಂಟಿ ನಿರ್ದೇಶಕರು, ಶಿವಮೊಗ್ಗ, ಬಳ್ಳಾರಿ, ಮೈಸೂರು, ಬೆಂಗಳೂರು ಮತ್ತು ಬೆಳಗಾವಿ

ಪ್ರತಿ:1.ಮೀನುಗಾರಿಕೆ ಉಪ ನಿರ್ದೇಶಕರು ,ಬಂದ್ ಬ್ರೀಡಿಂಗ್ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಬಿ.ಆರ್.ಪಿ, ಶಿವಮೊಗ್ಗ

2.ಮೀನುಗಾರಿಕೆ ಉಪ ನಿರ್ದೇಶಕರು, ರಾಷ್ಟ್ರೀಯ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಬಿ.ಆರ್.ಪಿ, ಶಿವಮೊಗ್ಗ

3.ಮೀನುಗಾರಿಕೆ ಉಪ ನಿರ್ದೇಶಕರು,ಕಬಿನಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಹೆಚ್.ಡಿ ಕೋಟೆ, ಮೈಸೂರು

4.ಮೀನುಗಾರಿಕೆ ಉಪ ನಿರ್ದೇಶಕರು,ನುಗು ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಸರಗೂರು ತಾ, ಮೈಸೂರು

5.ಮೀನುಗಾರಿಕೆ ಉಪ ನಿರ್ದೇಶಕರು,ಹಿಡ್ಕಲ್ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಹಿಡ್ಕಲ್

6.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಗಾಜನೂರು ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾರ್ಕೋನಹಳ್ಳಿ ಮೀನು ಮರಿ ಉತ್ಪಾದನಾ ಕೇಂದ್ರ, ಕುಣಿಗಲ್ ತಾ, ತುಮಕೂರು

7.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾರ್ಕಂಡೇಯ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಕೋಲಾರ

8.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೆಸರಘಟ್ಟ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಬೆಂಗಳೂರು( ನಗರ)

9.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬೇತಮಂಗಲ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ, ಕೋಲಾರ ಜಿಲ್ಲೆ

10.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶಿವಪುರ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ,

11.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ

12.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕಬಿನಿ ಕೈಗಾರಿಕೆ ವಸಹತು ಪ್ರದೇಶ ಮೀನುಮರಿ ಕೇಂದ್ರ, ಹೆಚ್.ಡಿ ಕೋಟೆ, ಮೈಸೂರು

13.ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹೊಸಬೂದನೂರು ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ

14. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಗುಂಡಾಲ್ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ

15. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕರಿಮುದ್ದನಹಳ್ಳಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ

16. ಶ್ರೀ.ಶೇಖ್ ಜಬಿಉಲ್ಲ, ನಕ್ವ ಎಂಟರ್ ಪ್ರೈಸಸ್ ,ಮೈಸೂರು ಜಿಲ್ಲೆ

17. ಇ-ಆಡಳಿತ ವಿಭಾಗಕ್ಕೆ ರವಾನಿಸುತ್ತಾ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ.

16/12/22

ಮೀನುಗಾರಿಕೆ ನಿರ್ದೇಶಕರ ಪರವಾಗಿ

## ANNEXURE-1

| Details of supplier for the supply of Floating pelleted Broodstock fish feed and other items for the year 2022-23 | | | | | |
|---|---|---|---|---|---|
| Sl. No. | Item Name | Item Code | Unit | L1 rates (in Rs.) | Name of the supplier |
| 1 | Extruded Floating Pelleted Broodstock Fish Feed(Growel Brood stock Fish Feed-32/5 Protein/Fat : 4-6 mm) | EXFPF010 | Kg | 59-00 | Sri.Sheikh Zabiulla, Naakwa Enterprises, Mysuru |
| 2 | Ground nut oil cake | GNOCO2 | Kg | 61-00 | |
| 3 | Polished oiled ricebran | PRBO1 | Kg | 37-00 | |

For Director of Fisheries